



ತಗಡಿನ ಹೊರಮೈ ಮಾಡಿಸಿದ್ದಾರೆಂದು ಹೇಳಲಾಗುತ್ತದೆ.

ಬುದ್ಧನ ನಿದ್ರಾವಸ್ಥೆ ಮೂರ್ತಿಯ ಪಾದದಲ್ಲಿ ಇರುವ ರಾಜಚಿಹ್ನೆಯು, ಅವನೊಬ್ಬ ಯುಗಪುರುಷ ಎನ್ನುವುದನ್ನು ಖಚಿತಗೊಳಿಸುತ್ತದೆ. ಆಲಯದ ಹಿಂದೆ 19 ಮೀ. ಎತ್ತರದ ಪ್ರಾಚೀನ ಸ್ತೂಪ ಹಾಗೂ ಸಮೀಪದಲ್ಲಿನ ಉದ್ಯಾನದಲ್ಲಿ ಧರ್ಮಗುರು ದಲೈಲಾಮ ಅವರಿಂದ ಸ್ಥಾಪಿಸಿದ ದೊಡ್ಡ ಘಂಟೆಯಿದೆ.

## ರಾಮಬಾರ್ ಸ್ತೂಪ

ರಾಮಬಾರ್ ಕಲಾತ್ಮಕವಾದ ಸ್ತೂಪ. ಇದರ ಉತ್ಖನನದ ಸಮಯದಲ್ಲಿ ದೊರೆತಿರುವ ದಾಖಲೆ ಬುದ್ಧನ ಕೊನೆಯ ದಿನಗಳ ದಿನಚರಿಯನ್ನು ತಿಳಿಸುತ್ತದೆ. ಈ ಸ್ತೂಪದಲ್ಲಿ 34 ಮೀ. ಉದ್ದದ ಕೊಳವು ಕಾಣುತ್ತದೆ. ಅಹಿಂಸಾವಾದಿಯಾದ ಬುದ್ಧ ತನ್ನ ಕೊನೆಯ ದಿನದಲ್ಲಿ ಶಿಷ್ಯ ನೀಡಿದ ಹಂದಿಮಾಂಸ ಭಕ್ಷಣೆಮಾಡಿ, ತನ್ನ ಮರಣಗಳಿಗೆಯಲ್ಲಿ ಈ ಕೊಳದ ನೀರು ಕುಡಿದು ಮುಕ್ತಿ ಹೊಂದಿದ ಎಂದು ಪ್ರತೀತಿಯಿದೆ. ಬುದ್ಧನ ಸಮಾಧಿ 4 ಮೀ. ಉದ್ದ, 14 ಮೀ. ಸುತ್ತಳತೆಯಲ್ಲಿ, ಅಲಂಕೃತ ಇಟ್ಟಿಗೆಗಳಿಂದ ರೂಪುಗೊಂಡಿದೆ. ಗೋಳಾಕಾರದ ಸಮಾಧಿಗೆ ಬೇಲಿಯ ಸಂರಕ್ಷಣೆಯಿದೆ.

## ವಾಟ್ ಥಾಯ್ ಕಾಂಪ್ಲೆಕ್ಸ್

ಬೌದ್ಧರ ಆಶ್ರಮ, ಮಠಗಳ ಸಂಕೀರ್ಣ ಹೊಂದಿರುವ 'ವಾಟ್ ಥಾಯ್ ಕಾಂಪ್ಲೆಕ್ಸ್'ನ ಪ್ರಮುಖ ಆಕರ್ಷಣೆ, ಬಂಗಾರದ ಮುಲಾಮಿನಿಂದ ಕಂಗೊಳಿಸುತ್ತಿರುವ ಬುದ್ಧನ ಪ್ರಭಾವಳಿಯ ಮೂರ್ತಿ ಅಲ್ಲಿದೆ.

ಸಂಡೆ ಸ್ಕೂಲ್, ಹೆಲ್ತ್ ಕ್ಲಿನಿಕ್‌ಗಳ ಸೌಲಭ್ಯ ಆ ಕಾಂಪ್ಲೆಕ್ಸ್‌ನಲ್ಲಿದೆ. ಅಲ್ಲಿ ತಂಗು ಕೊಠಡಿಗಳಿದ್ದರೂ ಅವು ಕೇವಲ ಥಾಯ್ ನಾಗರಿಕರಿಗೆ ಮಾತ್ರ ಲಭ್ಯ. ವಿಶಾಲವಾದ ಆ ಸಂಕೀರ್ಣದಲ್ಲಿನ ಬೋನ್ಸಾಯ್ ಗಿಡಗಳ ಸುಂದರವಾದ ಉದ್ಯಾನ ಪ್ರವಾಸಿಗರನ್ನು ಸ್ವಾಗತಿಸುತ್ತದೆ.

## ಮಾತಾ ಕೌರ್ ಮಂದಿರ

ಮಾಯಾದೇವಿಯ ಮಂದಿರವನ್ನು 'ಮಾತಾಕೌರ್' ಎನ್ನುತ್ತಾರೆ. ಇಲ್ಲಿ ಭೂಸ್ಪರ್ಶ ಮುದ್ರೆಯಲ್ಲಿದ್ದ ಅಂದಿನ ಯಥಾವತ್ ನಿಲುವಿನ ನೀಲಿ ಕಲ್ಲಿನ ಬುದ್ಧನ ಮೂರ್ತಿಯಿದೆ. ಅದರ ಎಡಗೈಯನ್ನು ಕಳ್ಳರು ಚಿನ್ನದ್ದೆಂದು ತಿಳಿದು ಕತ್ತರಿಸಿದ್ದಾರೆ. ಗೌತಮ ತನ್ನ ಕೊನೆಯ ಪ್ರವಚನವನ್ನು ನೀಡಿದ ಸ್ಥಳ ಅದಾಗಿದ್ದು, ಅಲ್ಲೀಗ ಯೋಗ, ಧ್ಯಾನ ಕೇಂದ್ರಗಳಿವೆ.

ವಿಶ್ವ ಬುದ್ಧ ಸಂಸ್ಕೃತಿ ಕೇಂದ್ರವಾಗಿರುವ ಆ ಮಂದಿರದಲ್ಲಿ, 1948ರಲ್ಲಿ ನಿರ್ಮಿಸಿದ ಕಟ್ಟಡದಲ್ಲಿ ಬುದ್ಧನ ಜೊತೆಗೆ ಆತನ 9 ಮಂದಿ ಶಿಷ್ಯರುಗಳಾದ ರಾಹುಲ, ಪೂರ್ಣ, ಉಪಾಲಿ, ಶಾಲೀಪುತ್ರ, ಮಹಾಕಶ್ಯಪ, ಅರುಲ್, ಮೌತಿಕಲ್ಯಾಣ್, ಆನಂದ ಮತ್ತು ಸಬೂತಿ ಅವರ ಶಿಲಾಪ್ರತಿಮೆಗಳಿವೆ. ಅಜಂತಾದ ಪದ್ಮಪಾಣಿ, ಅಮರಾವತಿ, ಸಾರಾನಾಥದ ಬುದ್ಧಪ್ರತಿಮೆಗಳು, ಸಾಲಭಂಜಿಕಾ ಹಾಗೂ ಕುಶಾನರ ಕಾಲದ ಬುದ್ಧನಿಗೆ ಸಂಬಂಧಿಸಿದ ಪಳಿಯುಳಿಕೆಗಳನ್ನು ಅಲ್ಲಿ ಕಾಣಬಹುದು.

## ಬುದ್ಧ ಮ್ಯೂಸಿಯಂ

ಬುದ್ಧನ ಭಗ್ನಾವಶೇಷ, ಶಿಲ್ಪಕೆತ್ತನೆ, ಕುಶಿನಗರದ ಟೆರಾಕೊಟಾ ಮಣ್ಣಿನಿಂದ ಮಾಡಿದ ಮಾದರಿ ಬೊಂಬೆಗಳು, ಟಿಬೆಟಿಯನ್ ತಂಗ್ಯಾಸ್ (ಚಚ್ಚೌಕದ ಬಟ್ಟೆಗಳಲ್ಲಿನ ಕಲಾಕೃತಿ) ಹಾಗೂ ಮೊಗಲ್ ಮಿನಿಯೇಚರ್ ಪೇಂಟಿಂಗ್‌ಗಳನ್ನು 'ಬುದ್ಧ ಮ್ಯೂಸಿಯಂ'ನಲ್ಲಿ ಪ್ರದರ್ಶನಕ್ಕೆ ಇರಿಸಲಾಗಿದೆ.

ಕುಶಿನಗರದ ಪ್ರವೇಶದಲ್ಲಿ ಅತ್ಯಾಕರ್ಷಕವಾದ ಕಮಾನು ದ್ವಾರವಿದ್ದು, ಪ್ರವಾಸಿಗರನ್ನು ಕೈಬೀಸಿ ಕರೆಯುವಂತೆ ಭಾಸವಾಗುತ್ತದೆ. ಆ ಜಾಗದಿಂದ ನಗರ ಸಾರಿಗೆ ಬಸ್‌ಗಳು ಲಭ್ಯ. ಅಲ್ಲಿನ ಹಿರಣ್ಯವತಿ ನದಿತೀರದಲ್ಲಿ ಬುದ್ಧನ ಮೃತಶರೀರ ದಹನವಾಗಿದೆಯೆಂದು ನಂಬಲಾಗಿದ್ದು, ಆ ಘಟನೆಯ ನೆನಪಿಗಾಗಿ 'ಬುದ್ಧಘಾಟ್' ನಿರ್ಮಿಸಲಾಗಿದೆ.

ಸುಮಾರು ನಾಲ್ಕೂವರೆ ದಶಕಗಳ ಸುದೀರ್ಘ ಧರ್ಮಪ್ರಚಾರದ ನಂತರ ಬುದ್ಧ ಅನಾರೋಗ್ಯಕ್ಕೆ ಗುರಿಯಾದ. ಅನಾರೋಗ್ಯದ ದಿನಗಳಲ್ಲೇ ಕುಶಿನಗರಕ್ಕೆ ಬಂದು, ತನ್ನ ಕೊನೆಯ ಪ್ರವಚನ ನೀಡಿದ. ಅಂತಿಮ ಕ್ಷಣಕ್ಕೆ ಬುದ್ಧನ ಮನಸ್ಸು ಸಿದ್ಧವಾಗಿತ್ತು. ಕೊನೆಯ ಊಟಕ್ಕಾಗಿ ಚುಂಡನ ಕರೆಗೆ ಓಗೊಟ್ಟು ಹಂದಿಮಾಂಸವನ್ನು ಸ್ವೀಕರಿಸಿ ಮರಣಶಯ್ಯೆಯತ್ತ ನಡೆದ ಅಜಾತಶತ್ರು. ಕೊನೆಯುಸಿರೆಳೆದಾಗಲೂ ಆತ ಧರಿಸಿದ್ದ ಹೊಂಬಣ್ಣದ ನಿಲುವಂಗಿಗಿಂತ ಹೆಚ್ಚು ಕಾಂತಿಯುತವಾಗಿತ್ತಂತೆ ಆತನ ನಿರ್ಜೀವ ಕಾಯ.

ಚಕ್ರವರ್ತಿ ಅಶೋಕ ಕುಶಿನಗರವನ್ನು ಸಂದರ್ಶಿಸಿ, ಅನೇಕ ಚೈತ್ಯ ವಿಹಾರಗಳನ್ನು ಕಟ್ಟಿಸಿದನಲ್ಲದೆ ಸ್ತೂಪವನ್ನು ನಿರ್ಮಿಸಿದನು. ಮುಂದೆ ಕುಶಾನರು ಕ್ಷೇತ್ರ ವಿಸ್ತರಿಸಿ, ಗುಪ್ತರು ಪರಿನಿರ್ವಾಣ ಮಂದಿರವನ್ನು ಪುನಃ ನಿರ್ಮಾಣಗೊಳಿಸಿದರು.

ಬುದ್ಧನ ನಾಲ್ಕು ಪಥಗಳೊಂದಿಗೆ ಗುರ್ತಿಸಲಾಗುವ ಲುಂಬಿನಿ, ಗಯಾ, ಸಾರಾನಾಥ ಮತ್ತು ಕುಶಿನಗರಗಳನ್ನು ಗುರ್ತಿಸಲಾಗುತ್ತದೆ. ಇವು ಬುದ್ಧನ ಜನನ, ಜ್ಞಾನೋದಯ, ಉಪದೇಶ ಮತ್ತು ನಿರ್ವಾಣಗಳ ಪವಿತ್ರ ಗಳಿಗೆಗಳಿಗೆ ಸಾಕ್ಷಿಯಾಗಿವೆ. ಹೀಗಾಗಿ, ಬುದ್ಧನ ಅಂತಿಮದಿನಗಳ ಅನುಭವವನ್ನು ನೀಡುವ ಕುಶಿನಗರ ಬುದ್ಧಪ್ರಿಯರ ನೆಚ್ಚಿನ ತಾಣವಾಗಿದೆ.

ಪ್ರತಿಕ್ರಿಯಿಸಿ: feedback@sudha.co.in